**ದಿನಾಂಕ 16.09.2019 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಬಿ.ಎಸ್ ವಕೀಲರಿಂದ**

ವಾದಿಗೆ ಇರುವ ಆಸ್ತಿ ವಾದಿಯ ಹೆಸರಿನಲ್ಲಿ ಪಹಣಿ ಇದೆ ಎಂದರೆ ಸಾಕ್ಷಿ ಅವರಿಗೆ ಇರುವ ಆಸ್ತಿ 2 ಗುಂಟೆ ಅವರಿಗೆ ಇದೆ ನನಗೆ ಇರುವ ಆಸ್ತಿ 2 ಗುಂಟೆ ನನಗೆ ಇದೆ ಎಂದು ಹೇಳುತ್ತಾರೆ. ವಾದಿಗೆ ಇರುವ 2 ಗುಂಟೆ ಆಸ್ತಿಯಲ್ಲಿ ವಾದಿ ಅನುಭೋಗದಲ್ಲಿ ಇದ್ದಾರೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ದಾಖಲೆಗಳು ಸರ್ವೆ ನಂಬರ್ 173/4 ಕ್ಕೆ ಸಂಬಂಧಿಸಿದ ದಾಖಲೆಗಳು. ನಾನು ನನ್ನ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. 1999 ರಿಂದ ಗಣಕ ಪಹಣಿ ಪತ್ರಿಕೆಗಳಲ್ಲಿ ನನ್ನ ಹೆಸರನ್ನು ನಮೂದು ಮಾಡಿಲ್ಲ ಸಾಕ್ಷಿ ಸ್ವತಃ ಕೈ ಬರಹ ಪಹಣಿಯಲ್ಲಿ ನನ್ನ ಹೆಸರು ನಮೂದು ಇದೆ ಎಂದು ಹೇಳುತ್ತಾರೆ. ನಿ.ಡಿ. 4 ನ್ನು ನಾನೇ ಸ್ವತಃ ಮಾಹಿತಿ ಕೊಟ್ಟು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ. 4 ನ್ನು ಬಿಟ್ಟರೆ ಬೇರೆ ದಾಖಲೆಗಳಲ್ಲಿ ನನ್ನ ಹೆಸರು ನಮೂದು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಸಂಬಂಧಿಸಿದ ಜಮೀನಿಗೆ ಬೇಲಿ ಹಾಕಲು ಹೋದಾಗ ಈ ದಾವೆ ತಂದಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ತೊಂದರೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ಈ ದಾವೆಗಾಗಿ ಸೃಷ್ಟಿ ಮಾಡಿ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.